
# ಶ್ರೀರಾಮಕೃಷ್ಣ ಶ್ರೀಶಾರದಾದೇವಿಯವರ ಆದರ್ಶ ದಾಂಪತ್ಯ

ಪ್ರವ್ರಾಜಿಕಾ ಧರ್ಮಪ್ರಾಣಾ

## ದಿವ್ಯ ವಿವಾಹ



ಪರಮಾತ್ಮನು ಚೈತನ್ಯಸ್ವರೂಪನು. ಅವನು ಭೂಮಿಯಲ್ಲಿ ಅವತರಿಸಿದಾಗಲೆಲ್ಲ ಆದ್ಯಾಶಕ್ತಿಯಾದ ಪರಮಪ್ರಕೃತಿಯೂ ನರಶರೀರಧಾರಣೆಯನ್ನು ಮಾಡಿದ್ದಾಳೆ. ತಾಯಿಯೂ, ಅಣ್ಣನೂ ತನಗಾಗಿ ವಧುವನ್ನು ಹುಡುಕಿ ಸಿಗದೆ ಹತಾಶರಾದಾಗ ಶ್ರೀರಾಮಕೃಷ್ಣರು ಅವರಿಗೆ ತನ್ನ ಸಹಧರ್ಮಿಣಿಯಾಗಲಿರುವವಳು ಜಯರಾಂಬಾಟಿಯ ರಾಮಚಂದ್ರ ಮುಖರ್ಜಿಯ ಮನೆಯಲ್ಲಿರುವವಳೆಂದು ತಿಳಿಸಿ, ಅಲ್ಲಿಗೆ ಹೋಗಿ ವಿಚಾರಿಸಲು ನಿರ್ದೇಶಿಸಿದರು. ಗದಾಧರನು ತನ್ನ ವಿವಾಹದ ಬಗ್ಗೆ ಹೀಗೆ ಆಸಕ್ತಿ ತೋರಿದ್ದನ್ನು ಕಂಡು ವಿಸ್ಮಿತರಾದ ತಾಯಿ ಮತ್ತು ಅಣ್ಣಂದಿರು, ಅವನು ನಿರ್ದೇಶಿಸಿದ ಸ್ಥಳವನ್ನು ಹುಡುಕಿ ನೋಡಿದರು. ಹೀಗೆ ರಾಮಚಂದ್ರ ಮುಖರ್ಜಿಯ ಮಗಳು ಶಾರದೆಯೊಂದಿಗೆ ಶ್ರೀರಾಮಕೃಷ್ಣರ ವಿವಾಹ ನಡೆಯಿತು. ಆಗ ರಾಮಕೃಷ್ಣರಿಗೆ ೨೩ ವರ್ಷ ವಯಸ್ಸಾದರೆ ಶಾರದೆಗೆ ಕೇವಲ ೫ ವರ್ಷ. ಗದಾಧರನನ್ನು ಗೃಹಸ್ಥನನ್ನಾಗಿ ಮಾಡಿ ಚಂದ್ರಮಣಿದೇವಿಯೇನೋ ನಿಶ್ಚಿಂತಳಾದಳು. ಆದರೆ ಈ ದಾಂಪತ್ಯ ಜೀವನದ ಮಹಾನ್ ಉದ್ದೇಶ ಯಾರಿಗೆ ತಾನೇ ಅರ್ಥವಾದೀತು?

ವಿವಾಹವಾದ ಕೆಲವು ದಿನಗಳಲ್ಲಿಯೇ ಶ್ರೀರಾಮಕೃಷ್ಣರು ಕೊಲ್ಕತಾಗೆ ಮರಳಿದರು. ಆ ನಾಡಿನ ನಿಯಮದಂತೆ ಶಾರದೆ ತವರುಮನೆಯಲ್ಲಿ ಬೆಳೆಯತೊಡಗಿದಳು. ದಕ್ಷಿಣೇಶ್ವರವನ್ನು ತಲುಪಿದ ಶ್ರೀರಾಮಕೃಷ್ಣರು ಪುನಃ ಭಗವತಿಯ ಚಿಂತನೆಯಲ್ಲಿ ಮುಳುಗಿದರು. ನಾನಾ ರೀತಿಯ ಸಾಧನೆಗಳನ್ನು ಮಾಡುತ್ತ ಈ ಪ್ರಪಂಚವನ್ನೇ ಮರೆತರು. ಆದರೂ ಹವೆ ಬದಲಾಯಿಸಲು ಆಗಾಗ ಕಾಮಾರಪುಕುರಕ್ಕೆ ಹೋದಾಗಲೆಲ್ಲ, ಶಾರದೆಯನ್ನು ತವರಿನಿಂದ ಕರೆಸಿಕೊಳ್ಳುತ್ತಿದ್ದರು. ಮೊದಲು ಅವರು ತಮ್ಮ ಪುಟ್ಟ ಪತ್ನಿಯ ಹೃದಯವನ್ನು, ತಮ್ಮ ದಿವ್ಯಪ್ರೇಮದಿಂದ ಗೆದ್ದರು. ನಂತರ ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಹಕರಿಸಲು ಅವಳಿಗೆ ಸೂಕ್ತ ತರಬೇತಿಯನ್ನು ನೀಡಲು ಆರಂಭಿಸಿದರು. ಶಾರದೆಯೂ ತನ್ನ ಪತಿಯನ್ನು ತನ್ನ ಇಷ್ಟದೈವವೆಂಬಂತೆ ಆರಾಧಿಸತೊಡಗಿದಳು.

## ದಿವ್ಯ ಗುರು – ದಿವ್ಯ ಶಿಷ್ಯೆ

ಆದರೆ ಅವರಿಬ್ಬರ ಬದುಕು ಇಷ್ಟಕ್ಕೇ ಸೀಮಿತವಾಗಲಿಲ್ಲ. ಶ್ರೀರಾಮಕೃಷ್ಣರು ಅವಳಿಗೆ ಗುರುವೂ ಆದರು. ತಮ್ಮ ಪತ್ನಿಗೆ ಅವರು ಮೂರು ಬಗೆಗಳಲ್ಲಿ ತರಬೇತಿ ನೀಡತೊಡಗಿದರು. ಮೊದಮೊದಲು ಅವರು ಕಾಮಾರಪುಕುರಕ್ಕೆ ಬಂದಾಗ ಶಾರದೆ ಚಿಕ್ಕ ಹುಡುಗಿ. "ನೋಡು, ಭಗವಂತನೇ ನಮ್ಮೆಲ್ಲರ ಜೀವನದ ಧ್ರುವತಾರೆ. ಅವನನ್ನು ಸದಾ ಸ್ಮರಿಸಬೇಕು. ಯಾರು ಕರೆದರೂ ಅವನು ಬರುವನು. ನೀನೂ ಅವನನ್ನು ಕರೆ" ಎಂದು ಹೇಳುತ್ತ, ಆಗಲೇ ಅವಳ ಮನಸ್ಸಿನಲ್ಲಿ ಉನ್ನತ ಜೀವನದ ಬಗೆಗಿನ ಆಕಾಂಕ್ಷೆಯನ್ನು ಶ್ರೀರಾಮಕೃಷ್ಣರು ಬಿತ್ತಿದರು. ಅದಲ್ಲದೆ

ಶ್ರೀರಾಮಕೃಷ್ಣರು ಶ್ರೀಮಾತೆಯವರೊಡನೆ ನಡೆಸಿದ ದಾಂಪತ್ಯವು ದೇಹ, ಮನಸ್ಸುಗಳಿಗೆ ಮೀರಿದುದು; ಪರಮಾತ್ಮಾನುಭೂತಿಯಲ್ಲಿ ಐಕ್ಯತೆಯನ್ನು ಕಂಡುಕೊಂಡಂಥದ್ದು. ಈ ಆಧ್ಯಾತ್ಮಿಕ ಸಂಬಂಧದ ಹಲವು ಮುಖಗಳನ್ನು ಮನೋಜ್ಞವಾಗಿ ಚಿತ್ರಿಸಿರುವ ಪೂಜ್ಯ ಮಾತಾಜಿಯವರು ಅರುಣಾಚಲ ಪ್ರದೇಶದ ಖೋನ್ಸಾ ಎಂಬಲ್ಲಿನ ರಾಮಕೃಷ್ಣ ಶಾರದಾ ಮಿಷನ್ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇನ್ನೊಂದು ಚಿನ್ನದಂತಹ ಮಾತನ್ನು ಹೇಳಿದರು, "ಚಂದ ಮಾಮನು ಎಲ್ಲರ ಮಾಮ. ಹಾಗೆಯೇ ದೇವರು ಕೂಡ ನಮಗೆಲ್ಲರಿಗೂ ಸೇರಿದವನು. ಯಾರು ಕರೆದರೂ ಅವನು ಬರುವನು. ನೀನೂ ಅವನನ್ನು ಕರೆ."

ಶಾರದೆ ಸ್ವಲ್ಪ ದೊಡ್ಡವಳಾದಂತೆ **ಶ್ರೀರಾಮಕೃಷ್ಣರು ಅವಳಿಗೆ ಜೀವನದ ರೀತಿನೀತಿಗಳ ಶಿಕ್ಷಣವನ್ನು ನೀಡತೊಡಗಿದರು.** ಹಿರಿಯರ ಸೇವೆ, ಕಿರಿಯರಲ್ಲಿ ಪ್ರೀತಿ, ಅತಿಥಿಸತ್ಕಾರ, ನೆರೆಹೊರೆಯವರಲ್ಲಿ ಸೌಹಾರ್ದದ ವ್ಯವಹಾರ ಮತ್ತು ರೋಗಿಗಳ ಮತ್ತು ಬಡವರ ಮೇಲೆ ಕರುಣೆ ಇತ್ಯಾದಿ; ಮನೆಯ ಎಲ್ಲಾ ಕೆಲಸಕಾರ್ಯಗಳನ್ನು ಹೇಗೆ ಅಚ್ಚುಕಟ್ಟಾಗಿ ಮಾಡುವುದು, ಪ್ರಯಾಣ ಮಾಡುವಾಗ ಹೇಗೆ ಸಾಮಾನುಗಳನ್ನು ಜೋಡಿಸಿ ರಕ್ಷಿಸುವುದು – ಇವುಗಳನ್ನೂ ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರಿಗೆ ಕಲಿಸಿದರು. ಹೀಗೆ ಭಗವತ್ ಸಾಕ್ಷಾತ್ಕಾರವು ಜೀವನದ ಉದ್ದೇಶವಾದರೂ ಸಂಸಾರದ ಕಾರ್ಯಗಳಲ್ಲಿ ನಿರ್ಲಕ್ಷ್ಯದಿಂದಿರಬಾರದೆಂದು ಅವರು ತಮ್ಮ ಪತ್ನಿಗೆ ಮನವರಿಕೆ ಮಾಡಿಕೊಟ್ಟರು.

ಒಂದು ದಿನ ಕಾಮಾರಪುಕುರದಲ್ಲಿ ಎಂದಿನಂತೆ ಶಾರದಾದೇವಿ ಮತ್ತು ರಾಮೇಶ್ವರನ (ರಾಮಕೃಷ್ಣರ ಅಣ್ಣ) ಪತ್ನಿಯರಿಬ್ಬರೂ ಸೇರಿ ಅಡಿಗೆಯಲ್ಲಿ ಮಗ್ನರಾಗಿದ್ದರು. ಪಲ್ಯಕ್ಕೆ ಒಗ್ಗರಣೆ ಹಾಕಬೇಕು, ಆದರೆ ಒಗ್ಗರಣೆ ಸಾಮಾನು ಖಾಲಿ ಆಗಿದೆ. "ಅಕ್ಕಾ, ಸಾಮಾನು ಇಲ್ಲವಲ್ಲ, ಹೇಗೆ ಒಗ್ಗರಣೆ ಹಾಕಲಿ?" ಎಂದು ಶಾರದೆ ಕೇಳಿದಳು. ಅದಕ್ಕೆ ರಾಮೇಶ್ವರನ ಪತ್ನಿ, "ಪರವಾಗಿಲ್ಲ, ಇಂದು ಒಗ್ಗರಣೆ ಇಲ್ಲದೆ ಪಲ್ಯ ಮಾಡು" ಎಂದಳು. ಹೊರಗಿನ ಕೋಣೆಯಲ್ಲಿ ಕುಳಿತು ಇವರ ಸಂಭಾಷಣೆಯನ್ನು ಕೇಳಿಸಿಕೊಂಡ ಶ್ರೀರಾಮಕೃಷ್ಣರು, "ಇದೇನು? ಮನೆಯಲ್ಲಿ ಇಲ್ಲದ ಸಾಮಾನುಗಳನ್ನು ಅಂಗಡಿಯಿಂದ ತರಿಸಿ, ಒಗ್ಗರಣೆ ಹಾಕಬಾರದೆ? ಯಾವುದನ್ನು ಹೇಗೆ ಮಾಡಬೇಕೋ ಅದೇ ತರಹ ಮಾಡಬೇಕು" ಎಂದರು. ಸಾಮಾನ್ಯ ಕೆಲಸಗಳನ್ನು ಕೂಡ ಹೇಗೆ ಶ್ರದ್ಧೆಯಿಂದ ಮಾಡಬೇಕೆಂಬುದನ್ನು ತಮ್ಮ ಪತ್ನಿಗೆ ಈ ರೀತಿ ಅವರು ಹೇಳಿಕೊಟ್ಟರು.

**ಮೂರನೆಯ ಶಿಕ್ಷಣವಾಗಿ ಶ್ರೀಶಾರದಾದೇವಿಯವರ ಮನಸ್ಸಿನಲ್ಲಿ ವೈರಾಗ್ಯದ ಬೀಜವನ್ನು ಶ್ರೀರಾಮಕೃಷ್ಣರು ಬಿತ್ತಿದರು.** ಅವರು ಆಗಾಗ ಹೀಗೆ ಹೇಳುವರು: "ಅನಿತ್ಯವಾದ ಈ ಜಗತ್ತಿನ ಹಿಂದಿರುವ ಪರಮಾತ್ಮನ ಸಾಕ್ಷಾತ್ಕಾರವೇ ಜೀವನದ ಮೂಲ ಉದ್ದೇಶ. ವಿವಾಹ ಮಾಡಿಕೊಂಡು ನರಿ ನಾಯಿಗಳಂತೆ ಹಲವು ಮಕ್ಕಳ ತಾಯಿಯಾಗುವುದರಲ್ಲಿ ಏನು ತಾನೇ ಆನಂದವಿದೆ? ನೋಡು, ನಿನ್ನ ತಾಯಿ ಅದೆಷ್ಟು ಮಕ್ಕಳನ್ನು ಹೆತ್ತಳು? ಕೆಲವು ಸತ್ತಾಗಂತೂ ಹುಚ್ಚಳೇ ಆಗಿದ್ದಳು." ಅದಲ್ಲದೆ, ಶಾರದೆಯಲ್ಲಿ ವೈರಾಗ್ಯವನ್ನು ಬಲಗೊಳಿಸಲು ಭಜನೆ, ಕೀರ್ತನೆ, ಧ್ಯಾನಗಳನ್ನು ಮಾಡುವುದನ್ನು ಶ್ರೀರಾಮಕೃಷ್ಣರು ಕಲಿಸಿದರು.

### ಆನಂದದ ಹೊನಲು

ಸದಾ ಆನಂದಮಯರಾಗಿರುತ್ತಿದ್ದ ಶ್ರೀರಾಮಕೃಷ್ಣರು ಶಾರದಾದೇವಿಯವರ ಹೃದಯದಲ್ಲಿ ಆನಂದದ ಹೊನಲನ್ನೇ ಹರಿಸುತ್ತಿದ್ದರು. ಮಧುರ ಕಂಠದಿಂದ ಹಾಡುತ್ತ, ಪುರಾಣದ ಕಥೆಗಳನ್ನು ಮತ್ತು ಹಾಸ್ಯದ ಪಾತ್ರಗಳನ್ನೂ ಅಭಿನಯಿಸಿ ತೋರಿಸುವರು. ಕೆಲವು ಸಲ ದಂಪತಿಗಳಲ್ಲಿ ವಿನೋದವೂ ನಡೆಯುತ್ತಿತ್ತು. ಒಂದು ದಿನ ಬೆಳಗ್ಗೆ ಅಂಗಳದಲ್ಲಿ ಶ್ರೀರಾಮಕೃಷ್ಣರು ಹಲ್ಲು ಉಜ್ಜುತ್ತಾ ನಿಂತಿದ್ದಾರೆ. ಪಕ್ಕದಲ್ಲೇ ಶಾರದೆ ಮನೆ ಕೆಲಸದಲ್ಲಿ ನಿರತರಾಗಿದ್ದಾರೆ. ಶ್ರೀರಾಮಕೃಷ್ಣರು ವಿನೋದವಾಗಿ, "ಹೆಂಗಸರು ಮಕ್ಕಳನ್ನು ಹೆರುತ್ತಾರೆ, ಆನಂದಿಸುತ್ತಾರೆ. ಅವುಗಳು ಸತ್ತರೆ ದುಃಖದಿಂದ ಗೋಳಿಡುತ್ತಾರೆ" ಎಂದರು. ಮಕ್ಕಳು ಸಾಯುವ ಬಗ್ಗೆ ಹೀಗೆ ಅನೇಕ ಬಾರಿ ಕೇಳಿ ಕೇಳಿ ಶಾರದಾದೇವಿ ಬೇಸತ್ತು ಹೋಗಿದ್ದರು. ಅಂದೇಕೋ ಅದು ಅತಿ ಅನ್ನಿಸಿತು ಅವರಿಗೆ. ಸ್ವಲ್ಪ ಮುನಿಸಿನಿಂದಲೇ "ಏನು ಎಲ್ಲಾ ಮಕ್ಕಳು ಹಾಗೆ ಸಾಯುತ್ತಾರೋ?" ಎಂದು ಸ್ವಲ್ಪ ಜೋರಾಗಿಯೇ ಕೇಳಿದರು; ಮಾತು ಮುಗಿಯುವುದರೊಳಗೆ ಮನೆಯ ಒಳಗೆ ಓಡಿಹೋದರು. ತನ್ನ ಮುಂದೆ ಲಜ್ಜೆಯಿಂದ ತಲೆಯೂ ಎತ್ತದ, ಜೋರಾಗಿ ಎಂದೂ ಮಾತನಾಡದ ಶಾರದೆ ಇಂದು ಇಷ್ಟು ಹೇಳಿದ್ದು ಕೇಳಿ, ಶ್ರೀರಾಮಕೃಷ್ಣರು ಅಳಿಯ ಹೃದಯನಿಗೆ, "ಓ ಹೃದು, ಪರವಾಗಿಲ್ಲ, ಮಾತು ಜೋರಾಗಿದೆ. ಎಲ್ಲೋ ಪಾಪ ಅಂದುಕೊಂಡಿದ್ದೆ" ಎಂದರು. ದಂಪತಿಗಳ ಈ ವಿನೋದವನ್ನು ಕಂಡು ಎಲ್ಲರೂ ನಕ್ಕುಬಿಟ್ಟರು.

ಇನ್ನೊಂದು ದಿನ ಹೃದಯನ ಜೊತೆ ಶ್ರೀರಾಮಕೃಷ್ಣರು ಊಟಕ್ಕೆ ಕುಳಿತಿದ್ದಾರೆ. ವಿನೋದವಾಗಿ ರಾಮೇಶ್ವರನ ಪತ್ನಿ ಮಾಡಿದ ಪಲ್ಯ ತೋರಿಸಿ, "ಹೃದು, ಇದು ರಾಮದಾಸ ವೈದ್ಯ (ಪ್ರಸಿದ್ಧ ವೈದ್ಯ) ತಯಾರಿಸಿದ್ದು. ಶಾರದಾದೇವಿ ಮಾಡಿದ ಪಲ್ಯ ತೋರಿಸಿ "ಇದು ಶ್ರೀನಾಥ್ ಸೇನ್ (ಸಾಧಾರಣ ಹಳ್ಳಿ ವೈದ್ಯ) ತಯಾರಿಸಿದ್ದು" ಎಂದರು. ಅವರ ಮಾತಿಗೆ ಹೃದಯನು "ಮಾವ, ರಾಮದಾಸ ವೈದ್ಯನಿಗೆ ಕೆಲಸ ಜಾಸ್ತಿ. ಶ್ರೀನಾಥ ಸೇನಾ ಯಾವಾಗ ಬೇಕಾದರೂ ಕಾಲು ಒತ್ತಲೂ, ಎಣ್ಣೆ ಸವರಲೂ ಸಿಗುವನು" ಎಂದನು. ಇದನ್ನು ಕೇಳಿ ಎಲ್ಲರೂ ಗೊಳ್ಳೆಂದು ನಕ್ಕರು. "ಅದೂ ಸರಿ" ಎಂದು ಶ್ರೀರಾಮಕೃಷ್ಣರೂ ಅವರೊಡನೆ ನಗುವಿನಲ್ಲಿ ಸೇರಿದರು.

### ಕಡುವಿರಹ – ಆನಂದದ ಮಿಲನ

ದಿನಗಳು ತಿಂಗಳುಗಳು ಹೀಗೇ ಕಳೆಯುತ್ತಿದ್ದವು. ಶಾರದಾದೇವಿ ಯೌವನಕ್ಕೆ ಕಾಲಿಟ್ಟರು. ಇತ್ತ ಶ್ರೀರಾಮಕೃಷ್ಣರು ನಾನಾ ಸಾಧನೆಗಳಲ್ಲಿ ತೊಡಗಿಸಿಕೊಂಡು, ಸಂಪೂರ್ಣ ಅಂತರ್ಮುಖರಾಗಿದ್ದಾರೆ. ಕೆಲವು ವರ್ಷಗಳು ಕಾಮಾರಪುಕುರಕ್ಕೆ ಬಂದೇ ಇಲ್ಲ. ಚಂದ್ರಮಣಿಯೂ ಮಗನ ಜೊತೆ ದಕ್ಷಿಣೇಶ್ವರದಲ್ಲಿ ವಾಸಿಸುತ್ತಿದ್ದಾರೆ. ಶಾರದೆಯಂತೂ ಪತಿಯನ್ನು ಕಾಣದೆ

ವಿರಹದಿಂದ ಪರಿತಪಿಸುತ್ತಿದ್ದಾರೆ. ಪತಿಯ ಸಂಪರ್ಕದಿಂದ ಅವರ ಮನಸ್ಸು ಕೂಡ ಭಕ್ತಿಭಾವದಲ್ಲಿ ಮಗ್ನವಾಗಿದೆ. ಹೀಗೆ ಪತಿಯ ಧ್ಯಾನದಲ್ಲಿದ್ದ ಶಾರದೆಗೆ ಕರ್ಣಕಠೋರವಾದ ಸುದ್ದಿ ತಲುಪಿತು. ಹಳ್ಳಿಯ ಜನರು ಮಾತನಾಡಿಕೊಳ್ಳುತ್ತಿದ್ದಾರೆ, ರಾಮಕೃಷ್ಣರಿಗೆ ಹುಚ್ಚು ಹಿಡಿದಿದೆ ಎಂದು! ನೀರಿಗಾಗಿ ನದಿಗೆ ಅಥವಾ ಇನ್ನು ಯಾವ ಕಾರಣಕ್ಕಾದರೂ ಹೊರಕ್ಕೆ ಹೋದರೆ ಹೆಂಗಸರು ಅವಳನ್ನು ನೋಡಿ, "ಪಾಪ, ಶಾರದೆ ಇನ್ನೂ ತವರುಮನೆಯಲ್ಲೇ ಇರಬೇಕಾಗಿದೆ. ಅವಳ ಪತಿ ಹುಚ್ಚನಾಗಿ ದ್ದಾನಂತೆ..."ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಇದು ಶಾರದೆಗೆ ಸಹಿಸದಾಯಿತು ಮಾತ್ರವಲ್ಲ, ತನ್ನ ಸ್ವಾಮಿಯ ಪರಿಚಯವಿದ್ದ ಅವರಿಗೆ ಇದನ್ನು ನಂಬಲೂ ಅಸಾಧ್ಯವಾಯಿತು. "ಆದರೆ ಇತ್ತೀಚೆಗೆ ಅವರು ಊರಿಗೆ ಬರದ ಕಾರಣ ಏನು? ಈ ಪ್ರಪಂಚದ ಮೇಲಿನ ವೈರಾಗ್ಯ ಇನ್ನೂ ದೃಢವಾಗಿ ಪತ್ನಿಯಾದ ನನ್ನನ್ನು ಅವರು ತ್ಯಜಿಸಿದರೆ? ಅಥವಾ ಭಕ್ತಿಯ ಉನ್ಮಾದ ವಿಪರೀತವಾಗಿ ಹುಚ್ಚರಾದರೆ? ಹಾಗಾದರೆ ಈ ಸಮಯದಲ್ಲಿ ನನ್ನ ಕರ್ತವ್ಯ ವೇನು? ಅವರ ಸೇವೆ ಮಾಡಲು ಹೆಣ್ಣಾದ ನಾನು ಅಷ್ಟು ದೂರ ಹೋಗುವುದಾದರೂ ಹೇಗೆ?" – ಹೀಗೆಲ್ಲ ಚಿಂತಿಸಿದ ಶಾರದೆಗೆ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲ, ಲಜ್ಜೆಯಿಂದ ತನ್ನ ಮನಸ್ಸಿನ ಇಚ್ಛೆಯನ್ನು ಯಾರಿಗೂ ಹೇಳಲು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಆದರೂ ಆಕೆಯ ಹೃದಯವು ಪತಿಯ ಸೇವೆಗಾಗಿ ಕಾತರಿಸುತ್ತಿತ್ತು.

ಇಷ್ಟು ದಿನಗಳ ಕಾಲ ಶ್ರೀರಾಮಕೃಷ್ಣರಿಂದ ಪಡೆದ ಶಿಕ್ಷಣದ ಫಲವಾಗಿ, ಶ್ರೀಮಾತೆಯವರು ಸಂದರ್ಭಕ್ಕೆ ಸರಿಯಾಗಿ ನಡೆ ಯುವ ಬುದ್ಧಿಶಕ್ತಿಯನ್ನು, ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವ ಛಲವನ್ನು ಪಡೆದುಕೊಂಡಿದ್ದರು. ಅಂತೆಯೇ ಗಂಗಾಸ್ನಾನಕ್ಕೆಂದು ಕೊಲ್ಕತಾಗೆ ಹೋಗುವ ಯಾತ್ರಿಕರ ಜೊತೆ ಯಲ್ಲಿ ಹೋಗಲು ತೀರ್ಮಾನಿಸಿ, ತಂದೆ ರಾಮಚಂದ್ರರಿಗೆ ತನ್ನ ಇಚ್ಛೆಯನ್ನು ತಿಳಿಸಿದರು. ರಾಮಚಂದ್ರ ಮುಖರ್ಜಿ ಮಗಳ ಮನೋಭಿಲಾಷೆಯನ್ನು ಅರಿತು, ತಾವೇ ಅಳಿಯನ ಬಳಿಗೆ ಮಗಳನ್ನು ಕರೆದೊಯ್ದರು.

ದಕ್ಷಿಣೇಶ್ವರಕ್ಕೆ ತಲುಪಿದಾಗ ಶಾರದೆಯ ದುಃಖ, ಆತಂಕ ಗಳೆಲ್ಲಾ ಮಾಯವಾದವು. ಶ್ರೀರಾಮಕೃಷ್ಣರು ಅತ್ಯಂತ ಆದರ ಪ್ರೀತಿಗಳಿಂದ ಪತ್ನಿಯನ್ನು ಸ್ವಾಗತಿಸಿ ಉಪಚರಿಸಿದರು. ಪತಿಯ ವರ್ತನೆ ಹಿಂದಿನಂತೆಯೇ ಇರುವುದನ್ನು ಕಂಡು ಶಾರದಾದೇವಿ ಯವರಿಗೆ ಸಮಾಧಾನವಾಯಿತು.

### ಅಪೂರ್ವ ದಾಂಪತ್ಯ

ಅದಾಗಲೇ ತಮ್ಮ ಸಕಲ ಸಾಧನೆಗಳನ್ನೂ ಸಂಪನ್ನಗೊಳಿಸಿದ ಶ್ರೀರಾಮಕೃಷ್ಣರು ತಾವು ಕಂಡುಕೊಂಡ ಸತ್ಯವನ್ನು ಜಗತ್ತಿಗೆ ಸಾರಿ, ಸಂಸಾರದಲ್ಲಿ ಮುಳುಗಿ ನರಳುತ್ತಿರುವ ಜನರಿಗೆ ಸಾಂತ್ವನ ವನ್ನು ನೀಡಲು ಉದ್ಯುಕ್ತರಾಗಿದ್ದರು. ಅದಕ್ಕೆ ಪೀಠಿಕೆಯಾಗಿ ಮೊದಲು ತಮ್ಮ ಪತ್ನಿಯನ್ನೇ ಪೂಜಾಪೀಠದಲ್ಲಿರಿಸಿ ಸಾಕ್ಷಾತ್ ಜಗನ್ಮಾತೆಯನ್ನು ಅವರಲ್ಲಿ ಆವಿರ್ಭಾವಗೊಳಿಸಿ ಪೂಜಿಸಿದರು.

ತುಂಬು ಯೌವನದಲ್ಲಿದ್ದ ಶ್ರೀರಾಮಕೃಷ್ಣರು ಮತ್ತು ನವಯುವತಿಯಾದ ಶಾರದಾದೇವಿಯವರ ದಾಂಪತ್ಯ ಜೀವನ ಹೀಗೆ ವಿಶೇಷ ರೀತಿಯಲ್ಲಿ ಮುಂದುವರಿಯಿತು. ಸಾಧಾರಣ ಪತಿಪತ್ನಿಯರ ಸಂಬಂಧವು ದೈಹಿಕ ಮತ್ತು ಮಾನಸಿಕವಾಗಿರು ತ್ತದೆ. ಆದರೆ ಈ ದಂಪತಿಗಳ ಸಂಬಂಧ ಇಂದ್ರಿಯಾತೀತವಾದ ಆತ್ಮಾನುಸಂಧಿಯಲ್ಲಿ ಇದ್ದಿತು. ಈ ಸಂಬಂಧವು ಇಂದ್ರಿಯ ಸಂಬಂಧಕ್ಕಿಂತಲೂ ಹೆಚ್ಚು ಆಪ್ಯಾಯಮಾನವಾಗಿದ್ದರಿಂದ, ಅವರಿಬ್ಬರ ನಡುವೆ ಅತಿ ನಿರ್ಮಲ ಮತ್ತು ಪವಿತ್ರವಾದ ಪ್ರೇಮಪ್ರವಾಹವು ಹರಿಯತೊಡಗಿತು.

ಶ್ರೀರಾಮಕೃಷ್ಣರು ತಮ್ಮಲ್ಲಿಯೂ, ತಮ್ಮ ಪತ್ನಿಯಲ್ಲಿಯೂ ಕಾಮದ ಗಂಧವಿದೆಯೇ ಎಂದು ಅನೇಕ ರೀತಿಯಲ್ಲಿ ಪರೀಕ್ಷಿಸಿ ದರು. ಒಂದು ದಿನ ಶಾರದಾದೇವಿ ಅವರ ಕಾಲು ತಡವು ತ್ತಿರುವಾಗ ಶ್ರೀರಾಮಕೃಷ್ಣರು ಅವರಿಗೆ, "ನೀನು ನನ್ನನ್ನು ಸಂಸಾರಕ್ಕೆ ಇಳಿಸಲು ಬಂದಿರುವೆಯಾ?" ಎಂದು ಕೇಳಿದರು. ಅದಕ್ಕೆ ಉತ್ತರ ವಾಗಿ ಶಾರದಾದೇವಿಯು "ನಾನೇಕೆ ನಿಮ್ಮನ್ನು ಸಂಸಾರಕ್ಕೆ ಇಳಿಸಲಿ? ನಿಮ್ಮ ಜೀವನಪಥದಲ್ಲಿ ಸಹಕರಿಸುವುದೇ ನನ್ನ ಇಚ್ಛೆ" ಎಂದರು. ಇನ್ನೊಂದು ದಿನ ಪತಿಯ ಕಾಲು ಒತ್ತುತ್ತ ಶಾರದಾದೇವಿ, "ನೀವು ಯಾವ ದೃಷ್ಟಿಯಿಂದ ನನ್ನನ್ನು ನೋಡುತ್ತೀರಿ?" ಎಂದು ಕೇಳಿದರು. ಒಡನೆ ಶ್ರೀರಾಮಕೃಷ್ಣರು "ಯಾರು ದೇವಸ್ಥಾನದ ಕಾಳಿಮಾತೆಯೋ, ಯಾರು ನನಗೆ ಜನ್ಮ ನೀಡಿದವಳೋ, ಅವಳೇ ಈಗ ನನ್ನ ಕಾಲನ್ನು ನೇವರಿಸು ತ್ತಿರುವವಳು" ಎಂದು ಹೇಳಿದರು.

### ಅನ್ಯೋನ್ಯ ಬಾಂಧವ್ಯ

ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ಶಾರದಾದೇವಿ ಯವರಿಬ್ಬರೂ ಪರಸ್ಪರ ಅರ್ಥಮಾಡಿಕೊಂಡು, ಎಲ್ಲ ಕಾರ್ಯ ಗಳಲ್ಲೂ ತಮ್ಮಲ್ಲಿ ಯಾರ ಮನಸ್ಸಿಗೂ ನೋವಾಗದಂತೆ ನಡೆದು ಕೊಳ್ಳುತ್ತಿದ್ದರು. ಒಬ್ಬರ ಅಭಿಪ್ರಾಯ ಇನ್ನೊಬ್ಬರಿಗೆ ಚೆನ್ನಾಗಿ ಗೊತ್ತಿದ್ದರಿಂದ, ಯಾವ ವೈಮನಸ್ಯಕ್ಕೂ ಅಲ್ಲಿ ಆಸ್ಪದವಿರಲಿಲ್ಲ. ಒಂದು ಸಲ ನಾರಾಯಣ ಮಾರವಾಡಿ ಎಂಬ ಭಕ್ತನು ಶ್ರೀರಾಮಕೃಷ್ಣರಿಗೆ ಹಣವನ್ನು ಕೊಡಲು ಮುಂದಾದನು. ಆಗ ಅವರು ಅದನ್ನು ಸ್ವೀಕರಿಸದೆ ಶಾರದಾದೇವಿಯವರ ಬಳಿ ಕಳುಹಿಸಿದರು. ಶಾರದಾದೇವಿಯೂ ಆ ಹಣವನ್ನು ಸ್ವೀಕರಿಸಲು ನಿರಾಕರಿಸಿದರು. ಇದರಿಂದ ಶ್ರೀರಾಮಕೃಷ್ಣರಿಗೆ ತುಂಬ ಆನಂದವಾಯಿತು.

ನಹಬತ್ ಎಂಬ ವಾದ್ಯದ ಕೋಣೆಯಲ್ಲಿ ಶಾರದಾದೇವಿ ಯವರು ವಾಸ ಮಾಡುತ್ತಿದ್ದರು. ಯಾವ ಸೌಕರ್ಯವೂ ಇಲ್ಲದ, ಅತಿ ಚಿಕ್ಕದಾದ ಈ ಕೋಣೆಯಲ್ಲಿ ಬಹು ಕಷ್ಟದಿಂದ

ಜೀವಿಸುತ್ತಿದ್ದರೂ, ಒಂದು ದಿನವಾದರೂ ಅದರ ಬಗ್ಗೆ ಶ್ರೀಮಾತೆಯವರು ಆಕ್ಷೇಪಣೆ ಮಾಡಲಿಲ್ಲ. ಅವರಿಗೆ ತಮ್ಮ ಪತಿಯ ಸಾನ್ನಿಧ್ಯ ಮತ್ತು ಸೇವೆಯೇ ಮುಖ್ಯವಾಗಿತ್ತು. ಸದಾ ಭಾವೋನ್ಮುಖರಾಗಿರುವ ಪತಿಯ ಶುಶ್ರೂಷೆಯನ್ನು ಶ್ರೀಮಾತೆಯವರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಮಾಡುತ್ತಿದ್ದರು.

ಶ್ರೀರಾಮಕೃಷ್ಣರಿಗೆ ತಮ್ಮ ಪತ್ನಿಯ ಯೋಗಕ್ಷೇಮದ ಬಗ್ಗೆ ಸದಾ ಕಳಕಳಿ. ಮುಂದೆ ಶ್ರೀಮಾತೆಯವರೇ ಹೇಳುವಂತೆ, ಒಂದು ದಿನವೂ ಅವರ ಮನಸ್ಸನ್ನು ನೋಯಿಸಲಿಲ್ಲ. ಅದಲ್ಲದೆ 'ನೀವು' ಎಂದು ಗೌರವದಿಂದ ಮಾತನಾಡಿಸುತ್ತಿದ್ದರೇ ಹೊರತು, 'ನೀನು' ಎಂದು ಸಂಬೋಧಿಸುತ್ತಿರಲಿಲ್ಲ. ಶ್ರೀಮಾತೆಯವರಿಗೆ ಒಂದು ಚಿಕ್ಕ ತಲೆನೋವು ಬಂದರೂ ಶ್ರೀರಾಮಕೃಷ್ಣರು ತವಕ ಪಡುತ್ತಿದ್ದರು. ಹೆಣ್ಣಿಗೆ ಅಲಂಕಾರವು ಅವಶ್ಯವೆಂದರಿತು ಶ್ರೀಮಾತೆಯವರಿಗೆ ಆಭರಣಗಳನ್ನು ಕೊಡಿಸಿದರು; ತಾವು ಕಾಲವಾದ ನಂತರ ಪತ್ನಿಯ ಜೀವನೋಪಾಯಕ್ಕೆ ವ್ಯವಸ್ಥೆ ಮಾಡಿದರು.

## ವಿಶ್ವ ಕುಟುಂಬ

ಈ ದಾಂಪತ್ಯ ಜೀವನ ಇಷ್ಟಕ್ಕೇ ನಿಲ್ಲದೆ ವಿಶಾಲವಾದ ವಿಶ್ವಕುಟುಂಬವಾಯಿತು. ದಿನಗಳು ಕಳೆದಂತೆ ಹೂವನ್ನು ಅರಸುತ್ತಾ ದುಂಬಿಗಳು ಬರುವಂತೆ, ನಾನಾ ದಿಕ್ಕುಗಳಿಂದ ಸಾಧಕರೂ, ಪಂಡಿತರೂ, ಭಕ್ತರೂ ಶ್ರೀರಾಮಕೃಷ್ಣರ ಬಳಿ ಬರತೊಡಗಿದರು. ಅನಂತರ ಪ್ರತಿಷ್ಠಿತ ನಾಗರಿಕರು ಅವರ ಪದತಲದಲ್ಲಿ ಕುಳಿತು ಅವರ ಉಪದೇಶಗಳನ್ನು ಕೇಳತೊಡಗಿದರು. ಹೀಗಿರುವಾಗ ಇತ್ತ ಶ್ರೀಶಾರದಾದೇವಿಯವರು ವಾದ್ಯದ ಕೋಣೆಯಲ್ಲಿ ಪತಿಯ ಈ ಕಾರ್ಯಕ್ಕೆ ಸಹಕರಿಸುತ್ತ, ಬರುವ ಭಕ್ತರಿಗಾಗಿ ಆಹಾರದ ತಯಾರಿಯಲ್ಲಿ ನಿರತರಾಗುತ್ತಿದ್ದರು.

ಶ್ರೀರಾಮಕೃಷ್ಣರ ಭಕ್ತೆಯರೂ ಒಮ್ಮೊಮ್ಮೆ ಶ್ರೀಮಾತೆಯವರ ಜೊತೆಯಲ್ಲಿ ಇದ್ದುಕೊಂಡು ಸಹಾಯ ಮಾಡುತ್ತಿದ್ದರು. ದಿನಗಳು ಕಳೆದಂತೆ ಶ್ರೀರಾಮಕೃಷ್ಣರ ಕೋಣೆಯಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗುತ್ತ, ದಿನಾ ರಾತ್ರಿ ಕೀರ್ತನೆ, ನೃತ್ಯ, ಪ್ರವಚನಗಳು ನಡೆಯುತ್ತಿದುದರಿಂದ, ಶ್ರೀಶಾರದಾದೇವಿಯವರಿಗೆ ಶ್ರೀರಾಮಕೃಷ್ಣರ ದರ್ಶನವೂ ಅಪರೂಪವಾಯಿತು. ಅವರು ಭಕ್ತೆಯರ ಮೂಲಕವೇ ಶ್ರೀರಾಮಕೃಷ್ಣರಿಗೆ ಆಹಾರ ಕಳುಹಿಸುತ್ತಿದ್ದರು; ಯುವಕ ಶಿಷ್ಯರು ಉಳಿದ ಸೇವೆಯನ್ನು ಮಾಡುತ್ತಿದ್ದರು. ವಾದ್ಯ ಕೋಣೆಯಿಂದಲೇ, ಅಲ್ಲಿ ನಡೆಯುವುದನ್ನೆಲ್ಲಾ ಶ್ರೀಮಾತೆಯವರು ಪರದೆಯ ಮೂಲಕ ಇಣಿಕಿ ನೋಡುತ್ತಿದ್ದರು. ದಂಪತಿಗಳು ಪರಸ್ಪರ ನೋಡುವುದು, ಮಾತನಾಡುವುದು ಕೂಡ ಅಪರೂಪವಾಗಿಬಿಟ್ಟಿತು. ಆದರೂ, ಅವರಿಬ್ಬರ ನಡುವಣ ಮೌನ ಪ್ರೇಮ ಸ್ವಲ್ಪವೂ ಕುಂದದೇ ಉಳಿದುಕೊಂಡು ಬಂದಿತು ಮಾತ್ರವಲ್ಲ, ದಿನೇ ದಿನೇ ವೃದ್ಧಿಯಾಗುತ್ತಲೇ ಇತ್ತು.

ತಾವು ಕಾಲವಾದ ನಂತರ ಜಗತ್ತಿಗೆ ತಮ್ಮ ಉಪದೇಶವನ್ನು ಸಾರಲು ಕೆಲವು ಯುವಕ ಶಿಷ್ಯರಿಗೆ ಶ್ರೀರಾಮಕೃಷ್ಣರು ಶಿಕ್ಷಣ

> ಪರಮಹಂಸರ ಜೀವನವು ಸರ್ವಧರ್ಮಗಳ ಸಮನ್ವಯ ತತ್ತ್ವವನ್ನು ಹೇಗೆ ನಿದರ್ಶಿಸುತ್ತಿದೆಯೋ ಹಾಗೆಯೇ ಸರ್ವಾಶ್ರಮಗಳ ಸಮನ್ವಯವನ್ನೂ ಕೂಡ ಎಂಬುದು ವೈಚಿತ್ರ್ಯವಾಗಿ ಕಾಣುವುದು. ಹಾಗೆಯೇ ಗುರುದೇವರು ಸಂನ್ಯಾಸಿಗಳಿಗೆ ಆದರ್ಶವಾಗಿದ್ದಂತೆ ಸಂಸಾರಿಗಳಿಗೂ ಆದರ್ಶವಾಗಿದ್ದಾರೆ.... ಅವರು ಸಾಧಾರಣ ಮಾನವರಂತೆ ಹೆಂಡತಿಯೊಡನೆ ಸಂಸಾರ ಹೂಡಲೂ ಇಲ್ಲ; ಆಕೆಯನ್ನು ಹೊರದೂಡಲೂ ಇಲ್ಲ. ಸತಿಯೊಡನೆ ಯಾವ ವಿಧವಾದ ದೈಹಿಕ ಸಂಬಂಧವನ್ನೂ ಇಟ್ಟುಕೊಳ್ಳದೆ ಆಕೆಯನ್ನು ಸ್ನೇಹವಚನಗಳಿಂದಲೂ ಉಪದೇಶಗಳಿಂದಲೂ ನಿಜಜೀವನದ ದೃಷ್ಟಾಂತಗಳಿಂದಲೂ ಉತ್ತಮೋತ್ತಮ ಜೀವನ ಶಿಖರಕ್ಕೆ ತಂದು ನಿಲ್ಲಿಸಿದರು. **–ಕುವೆಂಪು**

ಕೊಡತೊಡಗಿದರು. ಅವರಿಗೆಲ್ಲ ಶ್ರೀಶಾರದಾದೇವಿಯವರು ಮಾತೃಸ್ಥಾನದಲ್ಲಿದ್ದು ಉಪಚರಿಸುತ್ತಿದ್ದರು. ಅದಾದ ಕೆಲವು ವರ್ಷಗಳಲ್ಲಿ ಶ್ರೀರಾಮಕೃಷ್ಣರು ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿದ್ದಾಗ, ಶಾರದಾದೇವಿಯವರ ನೇತೃತ್ವದಲ್ಲಿ ಯುವ ಶಿಷ್ಯರು ಅವರನ್ನು ನೋಡಿಕೊಳ್ಳುತ್ತಿದ್ದರು. ಈ ಸಮಯದಲ್ಲೇ ಶ್ರೀರಾಮಕೃಷ್ಣರು. ಶಾರದಾದೇವಿಯವರನ್ನು ಮುಂದಿನ ಕಾರ್ಯಕ್ಕೆ ಮಾನಸಿಕವಾಗಿ ಸಿದ್ಧಗೊಳಿಸಿದರು. ಅಂತೆಯೇ ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ 'ರಾಮಕೃಷ್ಣ ಸಂಘ' ದ ಸಂಘಜನನಿಯಾಗಿ, ನೂರಾರು ಸಾಧುಗಳಿಗೆ ಮತ್ತು ಭಕ್ತರಿಗೆ ಮಾರ್ಗದರ್ಶಕರಾದರು.

## ದಿವ್ಯ ಆದರ್ಶ

ಪ್ರಾಪಂಚಿಕ ಸುಖಭೋಗಗಳನ್ನು ಸಂಪೂರ್ಣವಾಗಿ ತ್ಯಜಿಸಿ ದಾಂಪತ್ಯ ಜೀವನ ನಡೆಸಿದ ಈ ದಿವ್ಯದಂಪತಿಗಳು ಜಗತ್ತಿಗೆ ತೋರಿದ ಆದರ್ಶವಾದರೂ ಏನು? ಅವರಿಬ್ಬರ ನಡುವಣ ದಿವ್ಯ ಸಂಬಂಧವನ್ನು ಅರಿಯಬೇಕಾದರೆ ಸ್ವಲ್ಪವಾದರೂ ಆಧ್ಯಾತ್ಮಿಕ ಅರಿವು ಅತ್ಯಾವಶ್ಯಕ. ಅನಿತ್ಯವಾದ ಜಗತ್ತಿನ ಹಿಂದಿರುವ ನಿತ್ಯವಸ್ತುವನ್ನು ಕಾಣುವುದೇ ಮಾನವ ಜೀವನದ ಆದರ್ಶ. ಆದರೆ ಅದಕ್ಕಾಗಿ ಎಲ್ಲರೂ ಸಂನ್ಯಾಸಿಗಳಾಗಲು ಸಾಧ್ಯವಿಲ್ಲ. ಆದ್ದರಿಂದ, ಸಂಸಾರದಲ್ಲಿದ್ದುಕೊಂಡೇ, ಅನಾಸಕ್ತರಾಗಿ ನಿಷ್ಕಾಮಕರ್ಮವನ್ನು ಮಾಡುತ್ತ ಜೀವಿಸಿದರೆ, ಭಗವಂತನ ಸಾಕ್ಷಾತ್ಕಾರ ಸಾಧ್ಯವೆಂದು ಈ ದಿವ್ಯದಂಪತಿಗಳು ತೋರಿಸಿಕೊಟ್ಟಿದ್ದಾರೆ.

ಭಗವದ್ಭಾವಕ್ಕೆ ಮುಡಿಪಾದ ದಿವ್ಯ ದಾಂಪತ್ಯದ ಬಾಳುವೆ ಅನುಷ್ಠಾನಸಾಧ್ಯವೆಂದು ಜಗತ್ತಿಗೆ ತೋರಿಸಿ, ಮಾನವರಿಗೆ ಮಾರ್ಗದರ್ಶಕರಾಗಲೆಂದೇ ಶ್ರೀರಾಮಕೃಷ್ಣ ಮತ್ತು ಶ್ರೀಶಾರದಾದೇವಿಯವರು ಜನ್ಮತಾಳಿದರು. ಆ ದಿವ್ಯಭಾವವೇ ಇವರಿಬ್ಬರ ನಡುವಣ ಬಾಂಧವ್ಯದ ಸೇತುವೆಯಾಗಿತ್ತು, ಪ್ರೇಮಬಂಧನವಾಗಿತ್ತು. ಆ ದಿವ್ಯಭಾವದಲ್ಲಿ ಇವರಿಬ್ಬರೂ ಕೇವಲ ಸತಿಪತಿಗಳೆನಿಸಿದೆ ಐಕ್ಯಭಾವವನ್ನು ಹೊಂದಿದ್ದನ್ನು ನಾವು ಕಾಣಬಹುದು. ಅದೇ ಅವರಿಬ್ಬರ ದಾಂಪತ್ಯವನ್ನು ಆದರ್ಶಮಯವನ್ನಾಗಿ ಮಾಡಿರುವುದು.